# ವಾರ್ಡ್ ಸಭೆ ಸಂಖ್ಯೆ.39

ದಿನಾಂಕ:05.08.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

<u>ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು</u>

1 ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಅಧ್ಯಕ್ಷರು)**
2 ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
2 ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
3 ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈಧ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
4 ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
5 ಶ್ರೀ ಛಾಯಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
6 ಶ್ರೀ ಜಿ.ಕೆ ವೆಂಕಟೇಶಯ್ಯ, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
7 ಶ್ರೀ ಶ್ರೀ ಲಿಂಗರಾಜು ಕಂದಾಯ ಪರಿವೀಕ್ಷಕರು ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
8 ಶ್ರೀ ಶ್ರೀ ಜಮಿಲ್ ಸ.ಅ. ಬೀದಿ ದೀಪ ಬಿ.ಬಿ.ಎಂ.ಪಿ
9 ಶ್ರೀ ಬೀದಿ ದೀಪದ ಗುತ್ತಿಗೆದಾರರಾದ ಶ್ರೀ ಸತೀಶ್ ರವರು ವಾರ್ಡ್–44, ಮಾರಪ್ಪನಪಾಳ್ಯ
10 ಶ್ರೀ ಲೋಕೇಶ್ ಪಶುಸಂಗೋಪನ ಪರಿವೀಕ್ಷರು,
11 ಶ್ರೀ ಮಲ್ಲಯ್ಯ ರವರು ವಲಯ ಅರಣ್ಯಾ ಸಂರಕ್ಷಣೆ,
12 ಶ್ರೀ ರಾಜೇಶ್. ಸದಸ್ಯರು.
13 ಡಾ॥ ನಾಗೇಂದ್ರ ಸದಸ್ಯರು,
14 ಶ್ರೀ ಗೋಪಿ ಸದಸ್ಯರು,
15 ಶ್ರೀಮತಿ ಅಹಲ್ಯಾದೇವಿ ಆರ್.ಎಂ.ಸಿ. ಯಾರ್ಡ್ ಪೋಲೀಸ್ ಠಾಣಾ ಸಿಬ್ಬಂದಿ,

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 16 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 17 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 18 | ವಿಜಯಾನಂದನಗರದ ಸ್ಯಾನಿಟರಿ ಸಮಸ್ಯೆ ಈವರೆಗೂ ಪರಿಹಾರ ದೊರಕಿರುವುದಿಲ್ಲ ಆದ್ದರಿಂದ ಸಂಬಂದಪಟ್ಟವರಿಗೆ ಪತ್ರ ಬರೆಯಲು ಕೋರಿದರು. ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 19 | ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಐಮಾಸ್ಟ್ ಗಳ ಸಮಸ್ಯಗಳ ಬಗ್ಗೆ ತಿಳಿಸಿದರು, ಈ ಐಮಾಸ್ಟ್ ಲೈಟ್‌ಗಳ ಸಮಸ್ಯೆಗಳ ಬಗೆ ಗುತ್ತಿದಾರರು 14 ಐಮಾಸ್ಟ್ ಲೈಟ್‌ಗಳು ರಿಪೇರಿಯಾಗಿದ್ದು 2 ಐಮಾಸ್ಟ್ ಲೈಟ್ ಕಂಬಗಳು ಮಾತ್ರ ಬಾಕಿ ಉಳಿದಿವೆ ಇವುಗಳನ್ನು ಮುಂದಿನ ಸಭೆಯೊಳಗೆ ರಿಪೇರಿ ಮಾಡಿಕೊಡುತ್ತೇನೆಂದು ತಿಳಿಸಿದರು , ಮಾಹಿತಿಯನ್ನು ಮುಂದಿನ ಸಭೆಗೆ ತಿಳಿಸಲಾಗುವುದು. | ಬೀದಿ ದೀಪ ಇಲಾಖೆ |
| 20 | ಕಾರ್ಯದರ್ಶಿಗಳು ಕೋವಿಡ್‌ಗೆ ಸಂಬಂಧಿಸಿದ ಮಾಹಿತಿ ಕೋರಿದರು ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಸಭೆಗೆ ಸಭೆಗೆ ಸಮಗ್ರ ಮಾಹಿತಿಯನ್ನು ನೀಡಿದರು. | ಆರೋಗ್ಯ ವೈಧ್ಯಾಧಿಕಾರಿಗಳು |
| 21 | ಡಾ॥ ಶ್ರೀ ನಾಗೇಂದ್ರ ಸದಸ್ಯರು ರವರು ಬೋರ್‌ವೆಲ್‌ಗಳ ಬಗ್ಗೆ ಮಾಹಿತಿ ಕೋರಿದರು. ಶ್ರೀಮತಿ ಸುನಿತ ಕಿರಿಯ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ಕೊಳವೆ ಬಾವಿ ಉಪವಿಭಾಗ ರವರು ಲಭ್ಯವಿರುವ ಮಾಹಿತಿಯನ್ನು ನೀಡಿದರು. ಈ ಸಭೆಯಲ್ಲಿ ಮುಂದಿನ ತಿಂಗಳ ದುರಸ್ಥಿಯಾಗಿರುವ ಎಲ್ಲಾ ಪ್ಯಾನಲ್ ಗಳನ್ನು ದುರಸ್ಥಿ ಮಾಡಿಕೊಡುವುದಾಗಿ ಸಭೆಗೆ ತಿಳಿಸಿದರು | ಬಿ.ಡಬ್ಲ್ಯೂ.ಎಸ್. ಎಸ್.ಬಿ ಕೊಳವೆ ಬಾವಿ |

| | | |
|---|---|---|
| 22 | ಶ್ರೀ ಜಯಪಾಲ್ ಸದಸ್ಯರು ರವರು ಗೌತಮನಗರದಲ್ಲಿ ಕಂಬ ಮನೆಯಮೇಲೆ ಬಾಗಿರುತ್ತದೆ ಅದನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಅಧಿಕಾರಿಗಳನ್ನು ಸ್ಥಳ ಪರಿಶೀಲನೆಗೆ ಕಳುಹಿಸಿ ಸದರಿ ಕಂಬ ತೆರವುಗೊಳಿಸಲು ಸೂಚಿಸಿ ಇದರ ಬಗ್ಗೆ ಸಭೆಗೆ ತಿಳಿಸಿದರು. | ಬೀದಿ ದೀಪದ ಅಧಿಕಾರಿಗಳಿಗೆ |

| | | |
|---|---|---|
| 23 | ಶಂಕರನಗರ ಮುಖ್ಯರಸ್ತೆಯ ಸಾಯಿ ಸಂಘರ್ಷ ಆಯಿಲ್ ಮಿಲ್ ಹತ್ತಿರ ಮ್ಯಾನ್ ಹೋಲ್ ರಿಪೇರಿ ಮಾಡಲು ಬಿ.ಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಸೂಚಿಲು ಡಾ॥ ನಾಗೇಂದ್ರರವರು ಕೋರಿದರು, | ಕಾರ್ಯಧರ್ಶಿಗಳು |
| 24 | ಒಂಟಿ ಮನೆಗಳ ಬಿಲ್ಲುಗಳ ಪಾವತಿಯು ವಿಳಂಬವಾಗುತ್ತಿರುವ ಬಗ್ಗೆ ಡಾ॥ ನಾಗೇಂದ್ರರವರು ಸಭೆಯಲ್ಲಿ ಕಾರಣ ಕೇಳಿದರು ಇದಕ್ಕೆ ಕಾರ್ಯಧರ್ಶಿಗಳು ಕೇಂದ್ರ ಕಛೇರಿಯಿಂದ ಎಲ್.ಒ.ಸಿ ಬಿಡುಗಡೆಯಾಗಿರುವುದಿಲ್ಲ. ಹಣ ಬಿಡುಗಡೆಯಾದ ನಂತರ ಪಾವತಿ ಕ್ರಮ ಕೈಗೊಳ್ಳಲಾಗುವುದು. | ಕಾರ್ಯಧರ್ಶಿಗಳು |
| 25 | ಬಿ.ಎಲ್.ಒ ಗಳನ್ನು ಸಭೆಗೆ ಕಂದಾಯ ಅಧಿಕಾರಿಯೊಂದಿಗೆ ಕರೆದು ಸದರಿಯವರುಗಳ ಕಾರ್ಯವ್ಯಾಪ್ತಿಯ ಬಗ್ಗೆ ವಾರ್ಡ್ ಕಮಿಟಿಗೆ ತಿಳಿಸಲು ಡಾ॥ ನಾಗೇಂದ್ರರವರು ಕೋರಿದ್ದಾರೆ. | ಕಾರ್ಯಧರ್ಶಿಗಳು |
| 26 | ಬಿ.ಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು ಸಭೆಗೆ ಹಾಜರಾಗದಿರುವುದರಿಂದ ನೋಟೀಸ್ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತ್ತು. | ಕಾರ್ಯಧಿರ್ಶಿಗಳು |
| 27 | ವಿಜಯಾನಂದನಗರ ಮುಖ್ಯರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಇರುವ ಮನೆಗೆ ನೀರಿನ ಬಿಲ್ಲು ಹೆಚ್ಚಾಗಿ ಬಂದಿರುವುದರಿಂದ ಕಾರಣವೇನು ಎಂಬುದಕ್ಕೆ ಮಾಹಿತಿ ನೀಡಲು ಡಾ॥ ನಾಗೇಂದ್ರ ಕೋರಿದರು | ಬಿ.ಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳು |
| 28 | ಹರ್‌ಗರ್ ತಿರಂಗ್ ಕಾರ್ಯಕ್ರಮವನ್ನು ದಿನಾಂಕ:13-08-2022 ರಿಂದ 15-08-2022ರವರೆಗೆ ಅನುಷ್ಠಾನಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. | ಸರ್ವಸದಸ್ಯರು |
| 29 | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

**ಕಾರ್ಯಧರ್ಶಿ**

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ